

ಚಾಮರಾಜನಗರ ಜಿಲ್ಲೆಯ
ಹೊಗೇನಕಲ್ ಜಲಪಾತ

# ಪ್ರಕೃತಿ ಕೊರಳಿನ 'ಮುತ್ತಿನಹಾರ'!

## ನದಿಯ ನೀರು ಹಾಲ್ನೊರೆಯಂಥ ಹರಿವು

ಎಂ. ಮಹೇಶ್

ಮುಂಗಾರು ಮಳೆಯು ಮೂಡಿಸುವ ಸೊಬಗಿನ ವಿಸ್ಮಯವೇ ಜಲಪಾತ. ಇಲ್ಲಿ ನೀರು ಹಾಲ್ನೊರೆಯಂತಾಗಿ ಧುಮುಕುವುದನ್ನು ನೋಡುವುದು ಕಣ್ಣುಗಳಿಗೆ ಹಬ್ಬ. ಪ್ರಕೃತಿಯ ಕೊರಳಿಗೆ ಮುತ್ತಿನಹಾರದಂತೆ ಕಾಣುವ ಈ ಸೊಬಗು ಸೊಗಸಾದುದು. ವರ್ಷಧಾರೆ ತರುವ ಹರ್ಷಧಾರೆಯೂ ಹೌದು.

ಇಂತಹ ಆಕರ್ಷಕ ಹಾಗೂ ಪ್ರಮುಖ ಜಲಪಾತಗಳು ಮೈಸೂರು ಭಾಗದಲ್ಲೂ ಇದ್ದು, ಪರಿಸರಪ್ರಿಯರನ್ನು ಹಾಗೂ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿವೆ. ಬಹುತೇಕರ 'ಸೆಲ್ಫಿ ಫೋಟೊ'ಗಳಿಗೆ 'ಸ್ಪಾಟ್'ಗಳಾಗಿ ಕಂಗೊಳಿಸುತ್ತಿವೆ. ರಾಜ್ಯದ ವಿವಿಧ ಜಿಲ್ಲೆಗಳ ಜೊತೆಗೆ ಹೊರರಾಜ್ಯದ ಪ್ರವಾಸಿಗರು ಕೂಡ ಇಲ್ಲಿಗೆ ಹೆಚ್ಚಾಗಿ ಬಂದು ಕಣ್ತುಂಬಿಕೊಳ್ಳುತ್ತಾರೆ. ಪ್ರವಾಸಿಗರು ಕುಟುಂಬ ಸಮೇತವಾಗಿ ಬರುವುದು ವಿಶೇಷ.

ಉತ್ತಮ ಮಳೆಯಾಗಿರುವ ಕಾರಣ ಜಲಾಶಯಗಳು ತುಂಬಿದ್ದು, ನದಿಗೆ ನೀರು ಹರಿಸುತ್ತಿರುವುದರಿಂದಾಗಿ ಜಲಪಾತಗಳಿಗೆ 'ಜೀವಕಳೆ' ಬಂದಿದೆ. ಆ ಭಾಗದಲ್ಲಿ ಪ್ರವಾಸೋದ್ಯಮಕ್ಕೂ 'ಬೂಸ್ಟರ್ ಡೋಸ್' ಸಿಕ್ಕಿದೆ. ಇಂತಹ ಜಲಪಾತಗಳ 'ಚಿತ್ರ'ಣ ಇಲ್ಲಿದೆ.

### ಶ್ರೀರಾಮನ ನೆನಪಿನ ಧನುಷ್ಕೋಟಿ

ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲ್ಲೂಕಿನ ಚುಂಚನಕಟ್ಟೆ ಬಳಿ ಜೀವನದಿ 'ಕಾವೇರಿ'ಯು ಸುಮಾರು 50 ಅಡಿಗಿಂತಲೂ ಹೆಚ್ಚು ಎತ್ತರದಿಂದ ಭೋರ್ಗರೆಯುತ್ತಾ ಧುಮ್ಮಿಕ್ಕುವ ರುದ್ರರಮಣೀಯ ದೃಶ್ಯ ಕಾಣಸಿಗುತ್ತದೆ. ಈ ಜಲಧಾರೆಯ ತಾಣವಿರುವುದು ಕೆ.ಆರ್.ನಗರದಿಂದ 15 ಕಿ.ಮೀ. ಹಾಗೂ ಮೈಸೂರಿನಿಂದ 55 ಕಿ.ಮೀ. ದೂರದಲ್ಲಿ. ಕೊಡಗು ಜಿಲ್ಲೆಯಲ್ಲಿ ಉತ್ತಮ ಮಳೆಯಾದರೆ, ಕಾವೇರಿ ನದಿಯಲ್ಲಿ ನೀರು ಹರಿವಿನ ಮಟ್ಟ ಹೆಚ್ಚಳವಾದರೆ ಚುಂಚನಕಟ್ಟೆ ಜಲಪಾತ ಮೈದುಂಬಿಕೊಳ್ಳುತ್ತದೆ. ಬಂಡೆಗಳ ನಡುವೆ ಭೋರ್ಗರೆಯುತ್ತಾ ಹರಿಯುವ ನೀರಿನ ಶಬ್ದ ಸಮೀಪಿಸುತ್ತಿದ್ದಂತೆಯೇ ಜೋರಾಗಿ ಕೇಳಿಸುತ್ತದೆ.

ಚುಂಚನಕಟ್ಟೆ ಗ್ರಾಮದ ಹೊರವಲಯದ ಪ್ರಕೃತಿಯ ಐಸಿರಿಯ ನಡುವೆ ಇರುವ ಇದಕ್ಕೆ 'ಧನುಷ್ಕೋಟಿ' ಜಲಪಾತವೆಂದೂ ಹೆಸರಿದೆ. ಇದೇನು ನೀರೋ ಹಾಲಿನ ಹೊಳೆಯೋ ಎನಿಸದೇ ಇರದು. ಶ್ರೀರಾಮ ವನವಾಸ ಮಾಡುತ್ತಿದ್ದ ದಿನಗಳಲ್ಲಿ ಪತ್ನಿ ಸೀತಾಮಾತೆ

